ಖಾಯಿಲೆಗೆ ತಗಲುವ ವೆಚ್ಚವನ್ನು ಸರ್ಕಾರದ ವಿಶೇಷ ಆಜ್ಞೆಯಿಂದಾಗಲಿ ಅಥವಾ ಮುಖ್ಯಮಂತ್ರಿಗಳ ನಿಧಿಯಿಂದಾಗಲೀ ಭರಿಸುವ ವಿಚಾರವನ್ನು ಸರ್ಕಾರವು ಪರಿಶೀಲಿಸುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಯನ್ನು ಅಗಲಗೊಳಿಸಿ ಅಭಿವೃದ್ಧಿಗೊಳಿಸುವ ಮೂಲಕ ವಾಹನಗಳ ಸಾಂದ್ರತೆ ಹಾಗೂ ಅಪಘಾತ ತಡೆಗಟ್ಟುವ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದು ರಾಜ್ಯ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ಸಭೆಯ ಮುಂದೆ ನೀಡಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ 242 ಕಿ.ಮೀ. ಉದ್ದ ರಾಷ್ಟ್ರೀಯ ಹೆದ್ದಾರಿ ಮತ್ತು 606 ಕಿ.ಮೀ. ಉದ್ದ ರಾಜ್ಯ ಹೆದ್ದಾರಿ ಇರುತ್ತದೆ. ರಾಷ್ಟ್ರೀಯ ಹೆದ್ದಾರಿಯು 2 ಪಥ ರಸ್ತೆಯಾಗಿದ್ದು, ಎಂ.ಜಿ.ಎಸ್.ಟಿ. ನಿಯಮಗಳ ಪ್ರಕಾರ ಅಲ್ಲಿಯ ಸಂಚಾರಕ್ಕೆ ಅನುವಾಗುವಂತೆ ವಿನ್ಯಾಸಗೊಳಿಸಲಾಗಿದ್ದಿತು. ಪ್ರಸಕ್ತ ವಾಹನ ಸಂಚಾರ ದಟ್ಟಣೆ ಅತಿ ಹೆಚ್ಚಾಗಿರುವ ಭಾಗಗಳನ್ನು ಅಗಲಪಡಿಸುವ ಬಗ್ಗೆ ಕೇಂದ್ರ ಸರ್ಕಾರವು ಪರಿಶೀಲಿಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.

ರಾಜ್ಯ ಹೆದ್ದಾರಿ ಪೈಕಿ 686 ಕಿ.ಮೀ. ಉದ್ದದ ರಸ್ತೆಗಳು ಡಾಂಬರಿ ರಸ್ತೆಯಾಗಿರುತ್ತದೆ. ಹಾಗೂ 10 ಕಿ.ಮಿ. ಉದ್ದದ ರಸ್ತೆಗೆ ಡಾಂಬರೀಕರಣವನ್ನು ಮಾಡಬೇಕಾಗಿರುತ್ತದೆ. ಇದರಲ್ಲಿ 524 ಕಿ.ಮೀ. ಉದ್ದ ಏಕ ಪಥ ರಸ್ತೆಯಾಗಿರುತ್ತದೆ.169ಕಿ.ಮಿ. ಮಧ್ಯಮ ಪಥ ರಸ್ತೆಯಾಗಿರುತ್ತದೆ. ಸಂಚಾರದಟ್ಟಣೆಯನ್ನು ಗಮನಿಸಿ ಅತ್ಯಂತ ಅವಶ್ಯವಿರುವ ಭಾಗದಲ್ಲಿ ರಸ್ತೆಯನ್ನು ದ್ವಿಪಥ ರಸ್ತೆಗೆ ಅನುವಾಗುವಂತೆ ಅಗಲ ಪಡಿಸುವುದು ಹಾಗೂ ಪ್ರಥಮ ಹಂತದಲ್ಲಿ ಮಧ್ಯಮ ಪಥ 5.5 ಮೀಟರ್ ಅಗಲಕ್ಕೆ ಅಗಲಪಡಿಸುವ ಪ್ರಸ್ತಾವನೆಯನ್ನು ಹಾಕಿಕೊಂಡು ಅದರಂತೆ ಕಾಮಗಾರಿಗಳನ್ನು ಮಾಡಲಾಗುತ್ತಿದೆ. ಅನುದಾನದ ಲಭ್ಯತೆಯನ್ನು ಅನುಸರಿಸಿ, ರಸ್ತೆಗಳನ್ನು ಹಂತ ಹಂತವಾಗಿ ಸಂಚಾರ ದಟ್ಟಣೆಗೆ ಅನುವಾಗುವಂತೆ ಅಗಲಪಡಿಸಲಾಗುತ್ತದೆ.

ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದರ ಬಗ್ಗೆ.

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು 1989-90ನೇ ಸಾಲಿನ ವರ್ಷದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಪ್ರಸ್ತುತ ಈಗ ಉಳ್ಳಾಲದ ಪೇಟೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿದ್ದರೂ ಅದು ಕಾರ್ಯಗತಗೊಂಡಿರುವುದಿಲ್ಲ. ಆದುದರಿಂದ ಈ ಕ್ಷೇತ್ರದ ಜನರ ಬಹುದಿನಗಳ ಬೇಡಿಕೆಯಂತೆ ಪ್ರಸ್ತುತ ಈ ಉಳ್ಳಾಲ ಪೇಟೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಿ

ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸುವುದಲ್ಲದೆ ಉಳ್ಳಾಲಕ್ಕೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ತೆಗೆಯಬೇಕೆಂದು ರಾಜ್ಯ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ನಾನು ಈ ಹೇಳಿಕೆಯನ್ನು ಸಭೆಯಮುಂದೆ ನೀಡಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆ ಉಳ್ಳಾಲ ನಗರದಲ್ಲಿ ಹಾಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಯ ನಿರ್ವಹಿಸುತ್ತಾ ಇದೆ. ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಮಂಗಳೂರು ತಾಲ್ಲೂಕಿನಲ್ಲಿ1991ನೇ ಜನಗಣತಿಯ ಪ್ರಕಾರ ಜನಸಂಖ್ಯೆ 2,30,592 ಇರುತ್ತದೆ. ಮಂಗಳೂರು ತಾಲ್ಲೂಕಿನಲ್ಲಿನ ಮುಲ್ಕಿ ಗ್ರಾಮದಲ್ಲಿ 44 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಿರುತ್ತದೆ. ಉಳ್ಳಾಲ ಗ್ರಾಮದ ಅತಿ ಸಮೀಪದ ಮಂಗಳೂರಿನಲ್ಲಿ ಸರ್ಕಾರದ 675 ಹಾಸಿಗೆಗಳುಳ್ಳ ವೆನಲಾಕ್ ಜಿಲ್ಲಾ ಆಸ್ಪತ್ರೆ ಹಾಗೂ 250 ಹಾಸಿಗೆಗಳುಳ್ಳ ಲೇಡಿ ಗೋಷನ್ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದ್ದು, ಆ ತಾಲ್ಲೂಕಿನ ಗ್ರಾಮಸ್ಥರಿಗೆ ಸಾಕಷ್ಟು ಆರೋಗ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ರಾಜ್ಯದಲ್ಲಿ ಸ್ವಾಯತ್ತ ಆಸ್ಪತ್ರೆಗಳು

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ರಾಜ್ಯದಲ್ಲಿ ಎಷ್ಟು ಸ್ವಾಯತ್ತ ಆಸ್ಪತ್ರೆಗಳಿರುತ್ತವೆ. ಅವುಗಳಿಗೆ ನಿರ್ದೇಶಕರುಗಳನ್ನು ನೇಮಕಮಾಡಲು ಇರುವ ಮಾನದಂಡಗಳೇನು ? ನಿರ್ದೇಶಕರುಗಳನ್ನು ನೇಮಕ ಮಾಡಲು ಯಾವ್ಯಾವ ಸ್ವಾಯತ್ತ ಆಸ್ಪತ್ರೆಗಳಿಗೆ ಇರುವ ವಯೋಮಿತಿ ಏನು ? ವಯೋಮಿತಿಯಲ್ಲಿ ವ್ಯತ್ಯಾಸವಿದ್ದರೆ ಏಕೆ ಎಂದು ಸರ್ಕಾರದಿಂದ ತಿಳಿಯಬಯಸುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) : ರಾಜ್ಯದಲ್ಲಿ ಒಟ್ಟು 7 ಸ್ವಾಯತ್ತ ಆಸ್ಪತ್ರೆಗಳು ಇರುತ್ತವೆ.

1) ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ,

2) ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆ,

3) ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಈ ಮೂರು ಸಂಸ್ಥೆಗಳ ನಿರ್ದೇಶಕರ ನೇಮಕಾತಿಯನ್ನು ಸದರಿ ಸಂಸ್ಥೆಗಳ ಆಡಳಿತ ಮಂಡಳಿಗಳು ನೇರ ನೇಮಕಾತಿಯಿಂದ ಅಥವಾ 5 ವರ್ಷಗಳ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುವುದು. ಈ ನಿರ್ದೇಶಕರುಗಳ ಹುದ್ದೆಗೆ ಗರಿಷ್ಠ 50 ವರ್ಷಗಳ ವಯೋಮಿತಿ ಇದ್ದು, ವಿಶೇಷ ಸಂದರ್ಭದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ರಿಯಾಯತಿ ನೀಡಬಹುದಾಗಿರುತ್ತದೆ.

4) ನಿಮ್ಹಾನ್ಸ್ ಸಂಸ್ಥೆಯು ಭಾರತ ಸರ್ಕಾರದ ವ್ಯಾಪ್ತಿಗೆ ಬರುತ್ತದೆ

5) ಸಂಜಯಗಾಂಧಿ ಅಘಘಾತ ಮತ್ತು ಸಂಶೋಧನಾ ಸಂಸ್ಥೆ, ಈ ಸಂಸ್ಥೆಯ ನಿರ್ದೇಶಕರ